(ಅ) ಬೀದರ್ ಜಿಲ್ಲೆಯ ಬಸವಕಲ್ಯಾಣ ಹಾಗೂ ಕೂಡಲಸಂಗಮ ಪ್ರಾಧಿಕಾರ ರಚನೆಯ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು; ಇದುವರೆವಿಗೂ ಪ್ರಾಧಿಕಾರ ರಚಿಸದಿರಲು ಕಾರಣಗಳೇನು;

(ಆ) ಈ ಪ್ರಾಧಿಕಾರ ರಚನೆಯ ಉದ್ದೇಶವೇನು;

(ಇ) ಈ ಪ್ರಾಧಿಕಾರ ರಚನೆಗೆ ಸರ್ಕಾರವು ಹಣವನ್ನು ಬಿಡುಗಡೆ ಮಾಡಿದೆಯೇ; ಮಾಡಿದ್ದಲ್ಲಿ, ಎಷ್ಟು ; ಹಣ ಬಿಡುಗಡೆ ಮಾಡಿಲ್ಲದಿದ್ದರೆ ಹಣ ಬಿಡುಗಡೆ ಮಾಡುವ ಉದ್ದೇಶವೇನಾದರೂ ಇದೆಯೇ; ಎಷ್ಟು;

(ಈ) ಹಾಗಿದ್ದಲ್ಲಿ, ಎಷ್ಟು ಹಣ ಬಿಡುಗಡೆ ಮಾಡಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

(ಅ) ಕೂಡಲಸಂಗಮ ಅಭಿವೃದ್ಧಿ ಮಂಡಳಿಯನ್ನು ಶಾಸನಬದ್ಧ ಮಂಡಳಿಯಾಗಿ ರಚಿಸಲು ಕರಡು ವಿಧೇಯಕವನ್ನು ತಯಾರು ಮಾಡಲಾಗಿದೆ. ಇತ್ತೀಚೆಗಷ್ಟೇ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯು ಕರಡು ವಿಧೇಯಕವನ್ನು ಪರಿಶೀಲಿಸಿ, ಕಂದಾಯ ಇಲಾಖೆಗು ಕಳುಹಿಸಿದೆ. ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

(ಆ) ಉದ್ದೇಶಿತ ಶಾಸನಬದ್ಧ ಮಂಡಳಿಯು ಕೂಡಲ ಸಂಗಮದಲ್ಲಿ ಶ್ರೀ ಸಂಗಮನಾಥ ದೇವಸ್ಥಾನವನ್ನು ರಕ್ಷಿಸುವುದೇ ಅಲ್ಲದೇ ಕೂಡಲಸಂಗಮ ಕ್ಷೇತ್ರವನ್ನು ಸುಮಾರು 400 ಎಕರೆ ಪ್ರದೇಶದಲ್ಲಿ ಒಂದು ಅಂತರಾಷ್ಟ್ರೀಯ ಯಾತ್ರಾ, ಸಂಸ್ಕೃತಿ ಮತ್ತು ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿ ಪಡಿಸುವುದು. ಅಲ್ಲದೆ, ಪೂಜ್ಯ ಶ್ರೀ ಬಸವೇಶ್ವರರು ಮತ್ತು ಅವರ ಸಮಕಾಲೀನರಿಗೆ ಸಂಬಂಧಪಟ್ಟ ಸ್ಥಳಗಳನ್ನೂ ಅಭಿವೃದ್ಧಿ ಪಡಿಸುವುದೇ ಆಗಿದೆ.

(ಇ) ಇನ್ನೂ ಅಭಿವೃದ್ಧಿ ಮಂಡಳಿಯೇ ರಚಿತವಾಗಿಲ್ಲದಿರುವುದರಿಂದ, ಹಣ ಬಿಡುಗಡೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

(ಈ) (ಇ)ಗೆ ಕೊಟ್ಟಿರುವ ಉತ್ತರದಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪಂಚಾಯತ್ ರಾಜ್ ಕಾನೂನಿನನ್ವಯ ಅಧ್ಯಕ್ಷ/ಉಪಾಧ್ಯಕ್ಷ ಸದಸ್ಯರಿಗೆ ತರಬೇತಿ

162 - ಶ್ರೀ. ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ನೂತನ ಪಂಚಾಯತ್ ರಾಜ್ ಕಾನೂನಿನನ್ವಯ ಅಧಿಕಾರಕ್ಕೆ ಬಂದಿರುವ ಕೆಲವು ಜನ ಅಧ್ಯಕ್ಷ ಉಪಾಧ್ಯಕ್ಷರು ಅನಕ್ಷರಸ್ಥರಿದ್ದು, ಅವರಿಗೆಲ್ಲ ತಮ್ಮ ಅಧಿಕಾರ ಹಾಗೂ ಜವಾಬ್ದಾರಿಗಳನ್ನು ತಿಳಿಸಿಕೊಡಲು ಸರ್ಕಾರ ಯಾವಕ್ರಮ ಕೈಗೊಂಡಿದೆ ?

(ಆ) ಪಂಚಾಯಿತಿಗಳ ನೂತನ ಸದಸ್ಯರಿಗೆ ಅವರ ಹೊಣೆಗಾರಿಕೆ ತಿಳಿಸಿಕೊಡಲು ಸರ್ಕಾರ ತರಬೇತಿ ನೀಡಲು ಕ್ರಮ ಕೈಗೊಂಡಿದೆಯೇ ಏನು ವೇಳೆ ಕ್ರಮ ಕೈಗೊಂಡಿರದಿದ್ದರೆ ಸರ್ಕಾರ ಈ ದಿಶೆಯಲ್ಲಿ ಯಾವ ಕ್ರಮ ಕೈಗೊಳ್ಳಲಿದೆ (ವಿವರಗಳನ್ನೊದಗಿಸುವುದು).

ಶ್ರೀ. ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

(ಅ) ಹೊಸದಾಗಿ ಚುನಾಯಿತರಾಗಿ ಬಂದಿರುವ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸದಸ್ಯರಿಗೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅವರ ಕರ್ತವ್ಯ ಹಾಗೂ ಜವಾಬ್ದಾರಿಗಳ ಬಗ್ಗೆ ಎಲ್ಲಾ ಜಿಲ್ಲಾ ಪಂಚಾಯತ್ಗಳು ತರಬೇತಿ ನಡೆಸಬೇಕೆಂದು ಸರ್ಕಾರ ತನ್ನ ದಿನಾಂಕ 8-4-1994ರ ಸುತ್ತೋಲೆಯಲ್ಲಿ ತಿಳಿಸಿದೆ.

(ಅ) ಈ ಪ್ರಕಾರ ಎಲ್ಲಾ ಜಿಲ್ಲಾ ಪಂಚಾಯತ್ಗಳು ತರಬೇತಿ ಶಿಬಿರಗಳನ್ನು ನಡೆಸುತ್ತಿವೆ.

1993-94 ರಲ್ಲಿ ರಾಜ್ಯದ ವರಮಾನ

146 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಯೋಜನಾ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94ರಲ್ಲಿ ರಾಜ್ಯದ ಪ್ರಜೆಯ ತಲಾ ವರಮಾನ ಎಷ್ಟಿದ್ದಿತು;

ಆ) ಇದು ದೇಶದಲ್ಲಿ ಎಷ್ಟನೇ ಸ್ಥಾನ ಪಡೆದಿದೆ;

ಇ) ಚರ, ಸ್ಥಿರ ಸೊತ್ತುಗಳಿಲ್ಲದ ಕುಟುಂಬದವರ ಆದಾಯವನ್ನು ಯಾವ ಆಧಾರದ ಮೇಲೆ ಪರಿಗಣಿಸಲಾಗುತ್ತದೆ.

ಈ) ಸರ್ಕಾರದ ವಿವಿಧ ಯೋಜನೆಗಳ ಮುಖಾಂತರ ದೊರೆಯುವ ಸವಲತ್ತುಗಳನ್ನು ವಿತರಿಸುವಾಗ ಎಲ್ಲರಿಗೂ ಅನ್ವಯವಾಗುವಂತೆ ಒಂದೇ ರೀತಿಯ ಆದಾಯ ಮಿತಿಯನ್ನು ನಿಗಧಿಗೊಳಿಸುವುದು ಸೂಕ್ತವಲ್ಲವೇ?

ಶ್ರೀ ಕೆ.ಹೆಚ್. ಹನುಮೇಗೌಡ (ಯೋಜನೆ, ಅಬ್ಬುಕಟ್ಟು ಮತ್ತು ಪ್ರದೇಶಾಭಿವೃದ್ಧಿ ಸಚಿವರು) :

ಅ) 1993-94ರಲ್ಲಿ ರಾಜ್ಯದ ಪ್ರಜೆಯ ನಿರೀಕ್ಷಿತ ತಲಾ ವರಮಾನ ಚಾಲ್ತಿ ಹಾಗೂ ಸ್ಥಿರ ಬೆಲೆಗಳಲ್ಲಿ ಈ ಕೆಳಕಂಡಂತಿತ್ತು.

ಚಾಲ್ತಿ ಬೆಲೆಗಳಲ್ಲಿ (ರೂ.ಗಳಲ್ಲಿ)	ಸ್ಥಿರ (1980-81) ಬೆಲೆಗಳಲ್ಲಿ (ರೂ.ಗಳಲ್ಲಿ)
6,809-00	2,296-00

ಆ) ದೇಶದಲ್ಲಿ ಕರ್ನಾಟಕವು ತಲಾವಾರು ಆದಾಯದ ಅಂದಾಜಿನ ಪ್ರಕಾರ 1992-93ರಲ್ಲಿ ಆರನೆಯ ಸ್ಥಾನದಲ್ಲಿದೆ. 1993-94ನೇ ಸಾಲಿನ ಅಧಿಕೃತ ಅಂಕಿ ಅಂಶ ಇನ್ನೂ ಲಭ್ಯವಿರುವುದಿಲ್ಲ.

ಇ) ಚರ ಸ್ಥಿರ ಸೊತ್ತುಗಳಿಲ್ಲದ ಕುಟುಂಬದ ಆದಾಯದ ಮಾಹಿತಿಯು ದೊರೆಯುವುದಿಲ್ಲ. ಏಕೆಂದರೆ ಆರ್ಥ ವ್ಯವಸ್ಥೆಯಲ್ಲಿನ ವಲಯಗಳಾದ ಕೃಷಿ, ಅರಣ್ಯ, ಕೈಗಾರಿಕೆ ಇತ್ಯಾದಿಗಳಿಂದ ಬರುವ ಆದಾಯದ ಅಂದಾಜನ್ನು ಮೂಲ ಉದ್ಯಮಗಳ ಪ್ರಕಾರ ತಯಾರಿಸಲಾಗುತ್ತಿದೆ.

ಈ) ಇದು ಧೋರಣೆಯ ವಿಷಯ.

ವಿಧಾನ ಸೌಧದ ಸಭಾಂಗಣದ (ಬ್ಯಾಂಕ್ವೆಟ್ ಹಾಲ್) ಸೌಂದರ್ಯ ಉಳಿಸುವುದು.

298 - ಶ್ರೀ ಕೆ. ಲಕ್ಷ್ಮಣ್ (ರಾಜಾಜಿನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಧಾನ ಸೌಧವು ಅತ್ಯಂತ ನಯನಮನೋಹರ ಕಟ್ಟಡ ಎಂಬುದು ನಿಜವೆ.

ಆ) ಇದನ್ನು ನೋಡಲು ಪ್ರತಿ ಪ್ರವಾಸಿಗನೂ ಈ ಕಟ್ಟಡ ಹಾಗೂ ಇದರ ನಿರ್ಮಾತೃವಾದ ಮಾನ್ಯ ಕೆಂಗಲ್ ಹನುಮಂತಯ್ಯನವರನ್ನು ಶ್ಲಾಘಿಸುತ್ತಿರುವುದು ನಿಜವೆ.

ಇ) ಈ ಕಟ್ಟಡದ ಒಳಭಾಗದಲ್ಲಿರುವ ಪ್ರಶಾಂತ ಹಾಗೂ ತಂಪು ಹವೆಯ ಬೃಹತ್ ಸಭಾಂಗಣ (ಬ್ಯಾಂಕ್ವೆಟ್ ಹಾಲ್)ವನ್ನು ವಿವಿಧ ಪರೀಕ್ಷೆ ಮತ್ತು ಪ್ರದರ್ಶನಗಳನ್ನು ನಡೆಸಲು ಆಗಿಂದಾಗ್ಗೆ ನೀಡುತ್ತಿರುವುದು ನಿಜವೆ.